# ಬೇಲೂರು ಘೋಷಣೆ

ಪಂಚಾಯತಿ ರಾಜ್ ಸಂಸ್ಥೆಗಳ, ನಗರ ಸ್ಥಳೀಯ ಸರ್ಕಾರಗಳ ಹ್ಹಾಗೂ ಕರ್ನಾಟಕ ಸರಕಾರದ ಸದಸ್ಯರುಗಳಾದ ನಾವು ಧಾರವಾಡ ತಾಲ್ಲೂಕು ಬೇಲೂರಿನಲ್ಲಿ ನಡೆದ ಪಂಚಾಯತಿರಾಜ್ ಹಾಗೂ ನಗರ ಸ್ಥಳೀಯ ಸರ್ಕಾರಗಳ ಸಮಾವೇಶದಲ್ಲಿ , ತಾರೀಖು 23ನೇ ಜನವರಿ 2004 ರಂದು ನಾವೆಲ್ಲ ಜಂಟಿಯಾಗಿ ಹೊರಡಿಸಿದ ಘೋಷಣೆ.

**ವಿಕೇಂದ್ರೀಕರಣ ವ್ಯವಸ್ಥೆಯನ್ನು ಮತ್ತಷ್ಟು ಸಶಕ್ತಿಗೊಳಿಸಲು, ಜನರ ಸೇವೆಗಾಗಿ ಪಂಚಾಯತಿ ರಾಜ್ ಸಂಸ್ಥೆಗಳನ್ನು ಮತ್ತು ನಗರ ಸ್ಥಳೀಯ ಸರ್ಕಾರಗಳನ್ನು ಮತ್ತಷ್ಟು ಬಲಗೊಳಿಸಲು ಕರ್ನಾಟಕ ರಾಜ್ಯ ಸರ್ಕಾರ ಕೆಳ ಕಂಡ ಕ್ರಮಗಳನ್ನು ಕೈಗೊಳ್ಳುತ್ತದೆ**

1. ಯಾವ ಹಂತದಲ್ಲಿ ಏನೇನು ತೀರ್ಮಾನಗಳು ಆಗಬೇಕೋ ಅವು ಆಹಂತಗಳಲ್ಲೇ ಆಗಬೇಕು ಎನ್ನುವ ತತ್ವಕ್ಕೆ ಬದ್ಧರಾಗಿ ಚಟುವಟಿಕೆ ನಕ್ಷೆಗಳ ಅಧಾರದ ಮೇಲೆ ಹಣಕಾಸು, ಕಾರ್ಯಕ್ರಮಗಳು ಹಾಗೂ ಅದಕ್ಕೆ ಪೂರಕ ಸಿಬ್ಬಂದಿಗಳನ್ನು ಪಂಚಾಯತಿ ರಾಜ್ ಸಂಸ್ಥೆಗಳಲ್ಲಿ ಅಭಿವೃದ್ಧಿಗೊಳಿಸಲಾಗುವುದು,

2. ಪಂಚಾಯತಿ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸರ್ಕಾರಗಳ ಜತೆ ಸೇರಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಯೋಜನೆ ರೂಪಿಸಲಾಗುವುದು,

3. ಗ್ರಾಮ ಪಂಚಾಯತು ಮಟ್ಟದಲ್ಲಿ ಕೃಷಿ ಮತ್ತು ಕೃಷಿಯಾಧಾರಿತ ಚಟುವಟಿಕೆಯನ್ನು ಹೆಚ್ಚಿಸುವುದಕ್ಕಾಗಿ ವಿವಿಧ ಯೋಜನೆಗಳನ್ನು ಸಮನ್ವಯಗೊಳಿಸಲಾಗುವುದು,

4. 'ಅಕ್ಷರ ದಾಸೋಹ' ಕಾರ್ಯಕ್ರಮವನ್ನು ಪಂಚಾಯತಿರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸರ್ಕಾರಗಳಿಗೆ ಹಸ್ತಾಂತರ ಮಾಡಲಾಗುವುದು,

5. ಪ್ರಾಥಮಿಕ ಶಾಲೆಗಳು, ಗ್ರಾಮೀಣ ಗ್ರಂಥಾಲಯಗಳು, ವಯಸ್ಕ ಶಿಕ್ಷಣ ಕೇಂದ್ರಗಳು, ಅಂಗನವಾಡಿಗಳು, ಆರೋಗ್ಯ ಉಪ ಕೇಂದ್ರಗಳು ನ್ಯಾಯ ಬೆಲೆ ಅಂಗಡಿಗಳನ್ನು ಗ್ರಾಮ ಪಂಚಾಯತಿನ ಆಡಳಿತ ವ್ಯಾಪ್ತಿಗೆ ತರಲಾಗುವುದು,

6. ಗ್ರಾಮ ಮಟ್ಟದ ಕಂದಾಯ ಇಲಾಖೆಯ ಕಾರ್ಯ ಮತ್ತು ಸಿಬ್ಬಂದಿಗಳನ್ನು ಗ್ರಾಮ ಪಂಚಾಯತ್ ವ್ಯಾಪ್ತಿಗೆ ತರುವುದು ಮತ್ತು ಪಂಚಾಯತ್‌ನ ಆಡಳಿತ ವ್ಯವಸ್ಥೆಯನ್ನು ಸುಧಾರಿಸಲಾಗುವುದು,

7. ಪಂಚಾಯತಿ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸರ್ಕಾರಗಳ ಹೊಣೆಗಾರಿಕೆಯನ್ನು ಹೆಚ್ಚಿಸುವ ಸಲುವಾಗಿ ಲೋಕಾಯುಕ್ತ ವ್ಯವಸ್ಥೆಯಡಿಯಲ್ಲಿ ಜಿಲ್ಲಾ

ಮಟ್ಟದಲ್ಲಿ 'ಆಂಬುಡ್ಸಮನ್'. (ನ್ಯಾಯಾಧಿಕಾರವುಳ್ಳ ವೀಕ್ಷಕರು) ರನ್ನು ನೇಮಿಸಲಾಗುವುದು,

8. ಪಂಚಾಯತಿ ರಾಜ್ ಸಂಸ್ಥೆಗಳ ಸದಸ್ಯರ ಸಾಮರ್ಥ್ಯ ಹೆಚ್ಚಿಸುವುದು ಸೇರಿದಂತೆ ಗ್ರಾಮ ಪಂಚಾಯತುಗಳ ಹಣಕಾಸು ತಾಂತ್ರಿಕ ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು. ಸತತ ತರಬೇತಿ, ಶಿಕ್ಷಣ ಮತ್ತು ಸಂವಹನಗಳ ಮೂಲಕ ಇವು ಗಳನ್ನು ಸಾಧಿಸಲಾಗುವುದು,

9. ಗ್ರಾಮ ಪಂಚಾಯತುಗಳಿಗೆ ಕಂಪ್ಯೂಟರ್‌ಗಳನ್ನು ಒದಗಿಸಿ ಗ್ರಾಮ ಪಂಚಾಯತುಗಳನ್ನು ಇ-ಗೌರ್ನೆನೆನ್ಸ್‌ಗೆ ತಯಾರು ಮಾಡಲಾಗುವುದು

10. ಪ್ರಾಥಮಿಕ ಸಹಕಾರಿ ಸಂಘ ಅಥವಾ ಬ್ಯಾಂಕುಗಳಿಗೆ ಗ್ರಾಮ ಪಂಚಾಯತಿನ ಒಬ್ಬ ಸದಸ್ಯರನ್ನು ನೇಮಕ ಮಾಡುವುದರ ಮೂಲಕ ಸಹಕಾರಿ ಸಾಲ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಗುವುದು,

11. ನೀರು ಪೂರೈಕೆಗೆ ಸಂಬಂಧಿಸಿದ ಗುತ್ತಿಗೆ, ನೀರು ಸಂಗ್ರಹ, ನಿರ್ವಹಣೆಗೆ ಅಗತ್ಯವಾದ ಹಣಕಾಸನ್ನು ಪಂಚಾಯತಿ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸರ್ಕಾರಗಳಿಗೆ ಒದಗಿಸಲಾಗುವುದು,

12. ನಗರ ಸ್ಥಳೀಯ ಸರ್ಕಾರಳ ಸಮರ್ಥ ಕಾರ್ಯ ನಿರ್ವಹಣೆಗಾಗಿ ನಗರ ಯೋಜನೆಗಳನ್ನು ರೂಪಿಸಲಾಗುವುದು,

13. ನಿಗದಿತ ಪ್ರಮಾಣಕ್ಕೆ ಅನುಗುಣವಾಗಿ ನೀರನ್ನು ಜನರಿಗೆ ಪೂರೈಸಲು ನಗರ ಸ್ಥಳೀಯ ಸರ್ಕಾರಗಳ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು

14. ರಾಜ್ಯದಲ್ಲಿನ ಎಲ್ಲಾ ಪ್ರಥಮ ದರ್ಜೆ ನಗರಗಳಲ್ಲಿ ಒಳ ಚರಂಡಿ ವ್ಯವಸ್ಥೆಯನ್ನು ರಚಿಸಲು, ತ್ಯಾಜ್ಯ ವಿಲೇವಾರಿ ನಿರ್ವಹಣೆಗೆ ವ್ಯವಸ್ಥೆಯನ್ನು ರೂಪಿಸಲಾಗುವುದು

15. ನಗರಾಡಳಿತ ಸಂಸ್ಥೆಗಳಿಗೆ ವೃತ್ತಿಪರ ಸಿಬ್ಬಂದಿಯನ್ನು ಒದಗಿಸಲಾಗುವುದು

**ರಾಜ್ಯ ಸರ್ಕಾರದ ಈ ಎಲ್ಲಾ ಆಲೋಚನೆಗಳನ್ನು ಪಂಚಾಯತಿ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸರ್ಕಾರಗಳು ಸ್ವಾಗತಿಸುತ್ತವೆ ಮತ್ತು ಅವರು ಈ ಕೆಳ ಕಂಡ ವಿಷಯಗಳಿಗೆ ಬದ್ಧರಾಗಿದ್ದಾರೆ**

**ಪಂಚಾಯತಿ ರಾಜ್ ಸಂಸ್ಥೆಗಳು**

ಎಲ್ಲಾ ಸಾರ್ವಜನಿಕ ವೆಚ್ಚಗಳು ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಗರಿಷ್ಟ ಮಟ್ಟದ ಪಾರದರ್ಶಕತೆಯನ್ನು ಕಾಪಾಡಿಕೊಳ್ಳುತ್ತವೆ

ಪ್ರತಿ ವರ್ಷ ಕನಿಷ್ಟ 2 ಬಾರಿ ವಾರ್ಡ್ ಸಬೆ ಮತ್ತು ಗ್ರಾಮ ಸಭೆಗಳನ್ನು ನಡೆಸುತ್ತವೆ

ವಿವಿಧ ಯೊಜನೆಗಳಿಗೆ ನಿಜವಾದ ಅರ್ಹ ಫಲಾನುಭವಿಗಳನ್ನು ವಾರ್ಡ್ ಸಬೆ ಮತ್ತು ಗ್ರಾಮ ಸಭೆಗಳಲ್ಲೇ ಆರಿಸುತ್ತವೆ

ಪಂಚಾಯತಿ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸರ್ಕಾರಗಳ ಸಂಪನ್ಮೂಲನವನ್ನು ಹೆಚ್ಚಿಸುವ ಸಲುವಾಗಿ ತೆರಿಗೆ ಸುಧಾರಣೆ, ಗರಿಷ್ಟ ತೆರಿಗೆ ಸಂಗ್ರಹಕ್ಕೆ ಸಾಮರ್ಥ್ಯವನ್ನು ಹೆಚ್ಚಿಸುವುದು, ಗ್ರಾಮ ವ್ಯಾಪ್ತಿಯ ಎಲ್ಲಾ ಮನೆಗಳನ್ನು ಗ್ರಾಮ ಪಂಚಾಯತಿನ ವ್ಯಾಪ್ತಿಗೆ ತರಲು ಗ್ರಾಮ ಠಾಣೆಯ ವಿಸ್ತರಣೆ ಮುಂತಾದ ಯೋಜನೆಗಳನ್ನು ಕೈಗೊಳ್ಳಲಾಗುವುದು.

ಸ್ಥಳೀಯವಾಗಿ ಆದಾಯ ತರುವ ಸ್ಥಿರಾಸ್ಥಿಗಳನ್ನು ರೂಪಿಸುವುದು ಮತ್ತು ಅವುಗಳನ್ನು ಸಮರ್ಥವಾಗಿ ನಿರ್ವಹಿಸುವುದು

ಪ್ರಾಮಾಣಿಕತೆ ಮತ್ತು ಬದ್ದತೆಯೊಂದಿಗೆ ಜನರ ಆಶೋತ್ತರಗಳನ್ನು ಪೂರೈಸುವುದು

**ನಗರ ಸ್ಥಳೀಯ ಸರ್ಕಾರಗಳು:**

ಪಾರದರ್ಶವಾದ ರೀತಿಯಲ್ಲಿ ಸಮಗ್ರವಾಗಿ ಸಂಪನ್ಮೂಲನವನ್ನು ಕ್ರೋಢೀಕರಿಸುವುದು

ಇ–ಗೌರ್ನೆನ್ಸ್ ಜಾರಿ ಮೂಲಕ ನಗರ ಸ್ಥಳೀಯ ಸರ್ಕಾರಗಳಲ್ಲಿ ಉತ್ತಮ ಆಡಳಿತ ಒದಗಿಸುವುದು

ಸಾರ್ವಜನಿಕರ ದೂರು ಪರಿಹಾರಕ್ಕೆ ಸೂಕ್ತ ವ್ಯವಸ್ಥೆ ಮಾಡುವುದು

ನಗರ ಸ್ಥಳೀಯ ಸರ್ಕಾರಗಳ ಎಲ್ಲಾ ಆಡಳಿತದಲ್ಲಿ ಪಾರದರ್ಶಕತೆಯನ್ನು ತರುವುದು

ಈ ಘೋಷಣೆಯ ಎಲ್ಲಾ ಪಾಲುದಾರರು ತಮ್ಮ ತಮ್ಮ ಬದ್ದತೆಗನುಗುಣವಾಗಿ ಕೆಲಸ ಮಾಡಲು ಬದ್ದರು